.

***************************************************************

**ಜೀವನ ದೃಷ್ಟಿ ......ನನಗೆ ಹೊಳೆದಷ್ಟು .**

**ಮನುಷ್ಯ ಸಮಾಜ ಜೀವಿ .ಸಮಾಜದಲ್ಲಿ ಜೀವಿಸು ವಾಗ ಕೇವಲ ತನಗಾಗಿ ಜೀವಿಸದೆ ಕೆಲವೊಮ್ಮೆ ತನ್ನವರಿಗಾಗಿಯೂ ಇನ್ನೂ ಕೆಲವೊಮ್ಮೆ ಬೇರೆಯವರಿಗಾಗಿಯೂ ಬದು ಕುವುದು , ಆಲೋಚಿಸು ವುದು ಅನಿವಾರ್ಯ ಹೇಗೋ ಅಗತ್ಯ ಕೂ ಡ .**

**ಸಮಾಜದಲ್ಲಿ ಜೀವಿಸು ವಾಗ ಪ್ರತಿಯೊಬ್ಬನೂ ಇಲ್ಲಿ ಇರು ವುದು ತಾನೊಬ್ಬನೇ ಅಲ್ಲ , ನನ್ನ ಸು ತ್ತ ಸಮಾಜದ ಸದಸ್ಯರಿದ್ದಾರೆ ಎನ್ನುವುದನ್ನು ಮನಗಂಡಿರಬೇಕು .. ಮನಗಂಡಿರುತ್ತಾನೆ ಕೂ ಡ . ಹಾಗಾಗಿ ಅವನ ಆಲೋಚನೆಗಳು ,ವರ್ತನೆಗಳು ಅವನ ಸು ತ್ತ ಅಥವಾ ಅವನಿಗೆ ಮಾತ್ರ ಕೇಂದ್ರೀಕೃತವಾಗಿರದೇ ಬೇರೆಯವರಿಗಾಗಿಯೂ ರೂ ಪಿಸಲ್ಪಡುತ್ತವೆ .ಸಮಾಜ ತನ್ನನ್ನು ಗಮನಿಸು ತ್ತಿದೆ ಎಂದಾಗ ಸಮಾಜಕ್ಕೋಸ್ಕರವೇ ಕೆಲವೊಮ್ಮೆ ನಮ್ಮ ನಡುವಳಿಕೆಗಳು ವ್ಯಕ್ತಿತ್ವ ನಿರ್ದೇಶಿಸ್ಪಡುತ್ತವೆ.ಈ ಎಲ್ಲ ದೃಷ್ಟಿಯಿಂದ ಅವಲೋಕಿಸಿದಾಗ ನಮ್ಮ ಜೀವನದಲ್ಲಿ ನಮ್ಮ ಕು ರಿತಾದ ಅನ್ಯರ ದೃಷ್ಟಿಕೋನ ಪ್ರಧಾನ ಪಾತ್ರ ವಹಿಸು ತ್ತದೆ...ಹಾಗೆಯೇ ಅನ್ಯರಿಗೂ ..**

**ಅಂತರ್ಜೀವಿಯು ಮೊದಲಿಗೆ ತನ್ನನ್ನು ತಾನು ಪರಿಪೂ ರ್ಣಗೊಳಿಸಿಕೊಳ್ಳಬಯಸು ವುದರಿಂದ ಅವನ ವಿಚಾರವು ಕೆಲವೊಮ್ಮೆ ಅವನ ಸು ತ್ತಲೇ ಸು ತ್ತು ತ್ತಿ ರು ತ್ತದೆ ..ತನ್ನ ವ್ಯಕ್ತಿತ್ವವನ್ನು ರೂ ಪಿಸಿಕೊಳ್ಳುವುದರಲ್ಲೇ , ತನ್ನ ದೋಷವನ್ನು ಗು ರುತಿಸಿ ಅದನ್ನು ಸರಿಪಡಿಸಿ ಕೊಳ್ಳವುದರಲ್ಲೇ ಅವನ ಜೀವನದ ಸಮಯ ಕಳೆದು ಹೋಗು ತ್ತಿರು ತ್ತದೆ .ಅದರಲ್ಲೆ ಅವನ ಶಕ್ತಿ ವ್ಯಯವಾಗು ತ್ತಿರು ತ್ತದೆ. ಏಕೆಂದರೆ ಅಂತರಂಗದ ಭವ್ಯತೆಯ ಸಾಧನೆ ಅವನ ಗು ರಿ. ಅದರ ಸಂತೃಪ್ತಿಯ ತು ಡಿತ ಅವನಲ್ಲಿ ಮು ಖ್ಯವಾಗಿರು ತ್ತದೆ.ಹಾಗಾಗಿ ಇತರರ ಬಗ್ಗೆ ಪ್ರೀತಿ ಇದ್ದರೂ , ,ಅವನು ಪರಾಂತಃಕರಣಪ್ರವೇಶಿಯಾಗಿ ಅವರ ಭಾವನೆಗಳು , ಆಸೆಗಳು ,ದು ಗುಡ ದು ಮ್ಮಾನಗಳು ಅರ್ಥೈಸಿಕೊಂಡರೂ ಅದನ್ನು ಬಗೆಹರಿಸಲು ಅವನಿಗೆ ಸಾಧ್ಯವಾಗು ವುದಿಲ್ಲ .ಅಷ್ಟೇ ಅಲ್ಲ ತನ್ನ ಯೋಗಕ್ಷೇಮವನ್ನೂ ಕೂ ಡ ಅವನು ದೇವರ ಮೇಲೆ ಹೊರಿಸಲಾರ .ಈ ರೀತಿಯಾಗಿ ತನ್ನ ಗುಂಗಿನಲ್ಲಿಯೇ ಇರುವ ಅವನಿಗೆ ಪರರ ಹಂಗಿಲ್ಲ.**

mamatabhagwat1@gmail.com

ಹಿರಿಯ ಸಾಹಿತಿಯೊಬ್ಬರು ಹೇಳುವ ಹಾಗೆ ಕಲೋಪಾಸಕನಲ್ಲಿ ಸಮಾಜದ ಕಲ್ಯಾಣವನ್ನು ಪೋಷಿಸು ವ ಶಕ್ತಿ ಇದೆ.ಸಮಾಜದಲ್ಲಿ ಅವನಿಗೆ ಇನ್ನು ಯಾವುದೇ ಹೊಣೆ ಹೊರಿಸಬಾರದು .ಬದಲಾಗಿ ಅವನನ್ನು ಸಮಾಜವೇ ಪೋಷಿಸಬೇಕು ..
ಆದರೆ ಕಲೋಪಾಸಕನೂ ಸಮಾಜದ ಘಟಕ.ಸಮಾಜಕ್ಕೆ ಅವನು ಸಲ್ಲಿಸಬೇಕಾದ ಜವಾಬ್ದಾರಿಯಿದೆ.ಕಲಾಸೇವೆಯನ್ನು ಮಾಡಿದ ಮಾತ್ರಕ್ಕೆ ಅವನು ತನ್ನವರಿಗಾಗಲಿ ಅಥವಾ ಸಮಾಜಕ್ಕೇ ಆಗಲಿ ಸಲ್ಲಿಸ ಬೇಕಾದ ಸೇವೆಯಿಂದ ಮು ಕ್ತನಾಗು ವುದು ಸರಿಯೇ ?ಅವನ ವ್ಯಕ್ತಿತ್ವ ವಿಕಾಸವಾಗುವುದು ಸಮಾಜದಿಂದಲೇ ಆಗಿರುವುದರಿಂದ ತನಗೆ ಸಂಬಂಧಿಸಿದ ವ್ಯಕ್ತಿಗಳ ಅಥವಾ ಸಮಾಜದ ಅಂತಃಕರಣವನ್ನು ಅರಿತು ಅವರಿಗೆ ನೋವಾಗದಂತೆ , ತನ್ನ ವ್ಯಕ್ತಿತ್ವವಿಕಸನಕ್ಕೆ ಕಾರಣರಾದವರಿಗೆ ತನ್ನಿಂದಾದ ಸಹಾಯ ಸಲ್ಲಿಸುವುದು ಅವನ ಕರ್ತವ್ಯವೇ ಆಗಿದೆ .

ಧರ್ಮಗಳಲ್ಲಿ ಸೂ ಚಿಸಿದ ಹಾಗೆ ಅಂತರ್ಜೀವಿಗಳನ್ನು , ಸಾಧಕರನ್ನು ಸಮಾಜವೇ ಸಲಹಬೇಕು .ಪೋಷಿಸಬೇಕು .ಹಿಂದೆ ರಾಜಾಶ್ರಯವಿದ್ದಂತೆ ಇಂದು ಧರ್ಮಶಾಲೆಗಳು ,ಮಠಗಳು ,ಅನ್ನಛತ್ರಗಳು ಸಾಧಕರನ್ನು ಕಲಾವಿದರನ್ನು ಪೋಷಿಸು ವ ಕಾರ್ಯವನ್ನು ಮಾಡುತ್ತಿವೆ .ಆದರೆ ಸಮಾಜದಿಂದ ಉಪಕೃತನಾದ ಸಾಧಕನಿಗೂ ಅವನದೇ ಆದ ಕರ್ತವ್ಯವಿದೆ.ಅವನು ಇನ್ನೊಬ್ಬರಿಗೆ ಹೊರೆಯಾಗಬಾರದಲ್ಲವೇ?ತಾನಾಗಿಯೇ ಇನ್ನೊಬ್ಬರಿಂದ ಏನನ್ನೂ ತೆಗೆದು ಕೊಳ್ಳಬಾರದು . ಬಯಸಬಾರದು. . ದಾನ ಕೊಡು ತ್ತಿರುವವರ ಅಂತರಂಗ ಪರೀಕ್ಷಿಸಿ ತೆಗೆದು ಕೊಳ್ಳಬೇಕು . ಬೇರೆಯವರ ಮೇಲೆ ಅವಲಂಬಿತವಾದ ಸಾಧನೆ, ಬದು ಕು 'ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ' ..ಆಶ್ರಯ ತಪ್ಪಿದಾಗ ನೆಲ ಕಚ್ಚಬಹುದು ..

ಹಿಂದೆ ಅಂತರ್ಜೀವಿಗಳು ಸಮಾಜದಿಂದ , ಕು ಟುಂಬದಿಂದ (ಉದಾಹರಣೆಗೆ ಬು ದ್ಧ) ಪ್ರತ್ಯೇಕವಾಗಿ ಜೀವಿಸಿದಂತೆ ಇಂದಿನ ದಿನಗಳಲ್ಲಿ ಸಾಧಕರಿಗೆ ಪ್ರತ್ಯೇಕವಾಗಿ (ಬೇರೆಯಾಗಿ) ಬದುಕು ಕುವುದು ಸಾಧ್ಯವಿಲ್ಲ.ಅವನು ಸಮಾಜದ ಮಧ್ಯೆಯೇ ಬದು ಕಬೇಕು . ಜೀವನ ನಿರ್ವಹಣೆಗಾಗಿ ಪ್ರವೃತ್ತಿಯೊಂದೇ ಸಾಲದು ಅವನಿಗೆ ವೃತ್ತಿಯೂ ಬೇಕು . ಯೋಗಸ್ಥನಾಗಿರುವುದರ ಜೊತೆ ಗೃಹಸ್ಥನೂ ಆಗಿಯೆ ಬದು ಕುವ ಅನಿವಾರ್ಯತೆ ಇದೆ .ಗೃಹಸ್ಥಾಶ್ರಮವು ಧನ್ಯವೆಂದು ಕಾಳಿದಾಸನೂ ಸ್ವತಃ ಹೇಳದಿದ್ದರೂ ಅವನಿಂದ ಸೃಷ್ಟಿಸಲ್ಪಟ್ಟ ಆರಣ್ಯಕನೆಂಬ ಋಷಿ ಈ ಮಾತನ್ನು

ಹೇಳಿದ್ದಾನೆ.ದೂ ರದ ಬೆಟ್ಟ ಕಣ್ಣಿಗೆ ನು ಣ್ಣಗೆ ಎನ್ನುವಂತೆ ಗೃಹಸ್ಥಾಶ್ರಮದ ಅನುಭವವೇ ಇಲ್ಲದ ಆರಣ್ಯಕರಿಗೆ ಗೃಹಸ್ಥಾಶ್ರಮದ ಸಾಧಕ ಬಾಧಕಗಳು ಅರ್ಥವಾಗು ವುದು ಹೇಗೆ ಸಾಧ್ಯ ?

ಹಾಗೆ ನೋಡಿದರೆ ಗೃಹಸ್ಥಾಶ್ರಮದಿಂದ ಧನ್ಯತೆ ಸಾಧ್ಯ.ಗೃಹಸ್ಥಾಶ್ರಮದಲ್ಲಿದ್ದು ಕೊಂಡೇ ಕಾರ್ಯ ಮಾಡುವ ಸಾಧಕನಿಗೆ ಅವನ ಸಾಧನೆಯನ್ನು ಪುನಃ ಪರೀಕ್ಷಿಸುವ ,ವಿಮರ್ಶಿಸುವ ರತ್ನರಸಿಕರು (ವಿಮರ್ಶಕರು, ಪರೀಕ್ಷಕರು )ಸು ತ್ತ ಇದ್ದೇ ಇರುತ್ತಾರೆ.ಹೆಜ್ಜೆ ಹೆಜ್ಜೆಗೂ ಅವನ ಪರೀಕ್ಷೆಯಾಗುವುದರಿಂದ ಅವನು ಯೋಚಿಸಿ ಹೆಜ್ಜೆಯಿಡಬೇಕಾಗುತ್ತದೆ . ಇಲ್ಲವಾದಲ್ಲಿ ತಪ್ಪಡಿಯಿಟ್ಟರೂ ದಂಡ , ಕೆಲವೊಮ್ಮೆ ತಪ್ಪಿಲ್ಲದೆಯೂ ದಂಡ ತೆರಬೇಕಿರುವ ಸಾಧ್ಯತೆಯಿದೆ.ಹಾಗಾಗಿ ಏನನ್ನು ಮಾಡಬೇಕಿದ್ದರೂ ಯೋಚಿಸಿಯೇ ಮಾಡಬೇಕಾದ ಅನಿವಾರ್ಯತೆ ಇದೆ.ಇದು ಅವನ ವ್ಯಕ್ತಿತ್ವ ವಿಕಸನಕ್ಕೆ ಅನುಕೂ ಲ ಕೂ ಡ .

ಪರೋಪಕಾರಾರ್ಥಂ ಇದಂ ಶರೀರಂ ಎನ್ನುವಂತೆ ..ಅನ್ಯರ ಹಿತಚಿಂತನೆ ಪರಮಾತ್ಮನ ಉಪಾಸನೆಯ ಒಂದು ಭಾಗ.ತನ್ನಂತೆ ಪರರು ಎಂದು ಬಗೆದ ಮಾತ್ರಕ್ಕೆ ಆ ಮಟ್ಟದ ಉದಾರತೆಯಿಂದ ಮಾತ್ರವೇ ಬದು ಕಲು ಸಾಧ್ಯವಿದೆಯೇ?ಮನುಷ್ಯನಲ್ಲಿ ತನ್ನನ್ನು ರೂ ಪಿಸಿಕೊಳ್ಳುವ , ಬೆಳೆಸಿಕೊಳ್ಳುವ ಮತ್ತು ಬದುಕಲು ಅತೀ ಅವಶ್ಯವಾಗಿ ಬೇಕಿರುವ ವ್ಯವಹಾರ ಕು ಶಲತೆಯೂ ಬೇಕಲ್ಲವೇ?ಸಮಾಜದ ಪುನರ್ಘಟನೆಗೆ ಪರಿಶ್ರಮ ಮತ್ತು ಭಕ್ತಿ (ಸಮತಾವಾದ ಮತ್ತು ಆಧ್ಯಾತ್ಮವಾದ)ಹೇಗೆ ಅವಶ್ಯವೋ ಹಾಗೆಯೆ ಸಾಧಕನಲ್ಲೆ ಆಗಲಿ ಸಾಮಾನ್ಯನಲ್ಲೆ ಆಗಲಿ ಸ್ವಹಿತ ಮತ್ತು ಪರಹಿತ ಈ ಎರಡರ ಅಗತ್ಯವೂ ಇದೆ.'ಶಕ್ತಿಯೇ ಜೀವನ ;ಸತ್ವವೇ ಜೀವನ'.ಆದರೆ ಇದು ಅಹಂಆಗಿ ಪರಿಣಮಿಸಬಾರದು. ಅದರ ಸೂ ಕ್ಷ್ಮತೆ ವಿಶಾಲತೆಗಳ ಅರಿವು ನಮಗೆ ಬೇಕು .. ಸಮರಸವೇ ಸಹ ಜೀವನ..ಜೀವನದ ರಥ ಸರಾಗವಾಗಿ ಸಾಗಲು ಕೇವಲ ನಮ್ಮ ಅನುಭವಗಳಷ್ಟೇ ಸಾಲದು ..ಸಹಾನುಭೂ ತಿಯೂ ಬೇಕು . ಪರಸ್ಪರ ಸಹಕಾರ , ಹೊಂದಾಣಿಕೆ ಪ್ರೀತಿ, ಕರುಣೆ ಈ ಎಲ್ಲವುಗಳ ಅಗತ್ಯತೆ ಇದೆ.

ಪರರ ಅನುಭವವಗಳನ್ನು ನಮ್ಮ ಅನುಭವಗಳೊಂದಿಗೆ ಹೊಂದಿಸಿಕೊಂಡು ಬಾಳಲು ಎರಡು ಚಿಂತನೆಗಳು ಅಗತ್ಯ.ಒಂದು ತನ್ನಿಂದ ಬೇರೆಯವರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುವುದು .(ನಿರುಪದ್ರವಿಯಾಗಿರು ವುದು ) ಎರಡನೆಯದು ಸಾಧ್ಯವಾದಷ್ಟೂ

mamatabhagwat1@gmail.com

**ಸಂದರ್ಭಗಳಲ್ಲಿ ಅನ್ಯರಿಗೆ ಉಪಕಾರಿಯಾಗಿರಬೇಕು  ಎಂಬ  ಮನೋಭಾವ ಹೊಂದುವುದು ..ಆದ್ದರಿಂದಲೇ ದೇವರು  ಈ ಎರೆಡೂ   ವಿಚಾರಗಳನ್ನೂ  ಮಾನವನಿಗೆ ನೀಡಿ ಅವನ ಆಂತರಿಕ ವಿಕಾಸಕ್ಕಾಗಿ ಸಂದರ್ಭ ಬಂದಾಗ ನಿರ್ಧಾರ ತೆಗೆದು ಕೊಳ್ಳುವ ಒಳಗಣ್ಣನ್ನು ಆಜ್ಞಾಚಕ್ರ(ಮೆದು ಳು  , ಮೇಧಾ ಶಕ್ತಿ)ದಲ್ಲಿ ನೀಡಿದ್ದಾನೆ.**

mamatabhagwat1@gmail.com